**ಬೇಲೂರಿನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ**

ಸಿ.ಸಿ.ನಂ. 406/2022

| | | | |
|---|---|---|---|
| ಸಾಕ್ಷಿದಾರರ ಹೆಸರು | ರಮೇಶ್ | P.W | 7 |
| ತಂದೆಯ ಹೆಸರು | ಲೇಟ್ ಚಿಕ್ಕೇಗೌಡ | C.W | 1 |
| ವಯಸ್ಸು | 60 ವರ್ಷ | | |
| ಉದ್ಯೋಗ | ನಿವೃತ್ತ ಪಿ ಎಸ್ ಐ | ಪ್ರ.ವ.ಬೋ | |
| ವಾಸಸ್ಥಳ | ಹಾಸನ | ದಿನಾಂಕಃ 18-12-2023 | |

**ಮುಖ್ಯ ವಿಚಾರಣೆಃ- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-**

ದಿಃ28.02.2022 ರಂದು ಸಂಜೆ 5.30 ಗಂಟೆ ಸಮಯಕ್ಕೆ ನಾನು ಮತ್ತು ಚಾಸಾ-2 ಬೇಲೂರು ನಗರದ ಮುಖ್ಯ ರಸ್ತೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ನಗರದ ಮುಖ್ಯ ರಸ್ತೆಯ ಮುಂಭಾಗ ರಸ್ತೆ ಸಂಚಾರಕ್ಕೆ ಅಡಚಣೆ ಆಗುವಂತೆ ಕ್ರೂಸರ್ ವಾಹನ ನೋಂದಣಿ ಸಂಃಕೆಎ-06-ಬಿ-0656 ನ್ನು ನಿಲ್ಲಿಸಲಾಗಿದ್ದು, ಸದರಿ ವಾಹನ ಸಂಚಾರಕ್ಕೆ ಅಡಚಣೆ ಆಗುತ್ತಿದ್ದರಿಂದ ಈ ವಾಹನ ಯಾರದ್ದು ಇಲ್ಲಿಂದ ತೆಗೆಯಿರಿ ಎಂದು ಹೇಳಿದಾಗ ಅಲ್ಲೇ ಇದ್ದ ವಾಹನದ ಚಾಲಕ 2 ನೇ ಆರೋಪಿ ವಾಹನ ನನ್ನದೇ ಸ್ವಲ್ಪ ಸಮಯದ ನಂತರ ವಾಹನವನ್ನು ತೆಗೆಯುತ್ತೇನೆ ಎಂದು ಉಡಾಫೆಯಿಂದ ಹೇಳಿರುತ್ತಾನೆ. ಆಗ ನಾನು ಇಂದು ಸಂತೆ ಇರುವುದರಿಂದ ಹೆಚ್ಚಿನ ವಾಹನಗಳು ಬರುವುದರಿಂದ ಹಾಗೂ ರಸ್ತೆ ಕಿರಿದಾಗಿರುವುದರಿಂದ ಆಗುವುದಿಲ್ಲ ವಾಹನವನ್ನು ತೆಗೆ ಎಂದು ಹೇಳಿದಾಗ , ಅಲ್ಲೇ ಇದ್ದ 1 ನೇ ಆರೋಪಿ ಗೋಕುಲ್ ನಾನು ದಂಡ ವಿಧಿಸುತ್ತೇನೆ ಎಂದು ಹೇಳಿದಾಗ ಏನು ಮಾಡಿಕೊಳ್ಳುತ್ತೀರಿ ಮಾಡಿಕೊಳ್ಳಿ ಎಂದು , ಇಬ್ಬರು ಆರೋಪಿತರು ನಾನು ದಂಡ ಕಟ್ಟುವುದಿಲ್ಲ ಎಂದು ಹೇಳಿರುತ್ತಾರೆ. ಆಗ ನಾನು ದಂಡ ವಿಧಿಸಿ ನೋಟೀಸನ್ನು ಸಹಿ ಮಾಡಿ ನೀಡಿದ್ದು ಆಗ ಕಾರಿನಲ್ಲಿ ಕುಳಿತಿದ್ದ 1 ನೇ ಆರೋಪಿ ವಾಹನದಿಂದ ಇಳಿದು ಬಂದು ಏನು ಮಾಡಿಕೊಳ್ಳುತ್ತೀರಿ ಮಾಡಿ ಎಂದು ಹೇಳಿ ಅವಾಚ್ಯ ಶಬ್ದಗಳಿಂದ ಬೈದು , 1 ನೇ ಆರೋಪಿಯು

ಕೈಯಿಂದ ನನ್ನ ಕುತ್ತಿಗೆಯ ಮೇಲೆ ಎರಡು ಪೆಟ್ಟುಗಳನ್ನು ಹೊಡೆದು , 2 ನೇ ಆರೋಪಿ ಚಂದ್ರಶೇಖರ್ ನು ಆತನ ಕೈಯಲ್ಲಿ ಇದ್ದ ಕೀಯಿಂದ ನನ್ನ ತಲೆಗೆ ಕುಕ್ಕಿ ರಕ್ತಗಾಯಪಡಿಸಿರುತ್ತಾನೆ. ಇದರಿಂದ ನಮ್ಮ ಸರ್ಕಾರಿ ಕರ್ತವ್ಯಕ್ಕೆ ಅಡಚಣೆ ಆಗಿರುತ್ತದೆ. ಆಗ ಅಲ್ಲೆ ಇದ್ದ ಚಾಸ-2 , 3 ಮತ್ತು 6 ರವರು ಗಲಾಟೆಯನ್ನು ಬಿಡಿಸಿರುತ್ತಾರೆ. ಚಾಸಾ-4 ಮತ್ತು 5 ರವರು ಬಂದು ಗಲಾಟೆಯನ್ನು ಬಿಡಿಸಿರುತ್ತಾರೆ. ನಂತರ ನಾನು ಈ ಬಗ್ಗೆ ಠಾಣೆಗೆ ತೆರಳಿ ದೂರನ್ನು ನೀಡಿರುತ್ತೇನೆ. ಸದರಿ ದೂರಿನ್ನು ನೋಡುತ್ತಿದ್ದು ಅದನ್ನು ನಿಪಿ-12 ಎಂದು ಸಾಕ್ಷಿಯ ಸಹಿಯನ್ನು ನಿಪಿ-12 ಎ ಎಂದು ಗುರುತಿಸಲಾಯಿತು. ದೂರನು ನೀಡಿದ ನಂತರ ನಾನು ಬೇಲೂರು ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತೇನೆ.

ನಂತರ ದಿಃ01.03.2022 ರಂದು ಬೆಳಿಗ್ಗೆ 10 ಗಂಟೆ ಸಮಯಕ್ಕೆ ಚಾಸ-12 ರವರು ಕೃತ್ಯ ನಡೆದ ಸ್ಥಳದಲ್ಲಿ ನಾನು ತೋರಿಸಿದಂತೆ ನಾನು ತೋರಿಸಿದಂತೆ ಚಾಸಾ-3 ಮತ್ತು 7 ರವರ ಸಮಕ್ಷಮ ಬೆಳಿಗ್ಗೆ 10 ರಿಂದ 10.45 ಗಂಟೆ ಸಮಯಕ್ಕೆ ನಿಪಿ-2 ರಂತೆ ಮಹಜರ್ ಕ್ರಮ ಜರುಗಿಸಿರುತ್ತಾರೆ. ಸದರಿ ಮಹಜರ್ ನಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ-2 ಬಿ ಎಂದು ಗುರುತಿಸಲಾಯಿತು. ಈ ಬಗ್ಗೆ ನಾನು ಚಾಸಾ-12 ರವರ ಮುಂದೆ ಮರು ಹೇಳಿಕೆ ನೀಡಿರುತ್ತೇನೆ. ಸದರಿ ರಸ್ತೆಗೆ ಅಡ್ಡಲಾಗಿ ನಿಲ್ಲಿಸಿದ್ದ ವಾಹನವನ್ನು ಛಾಯಾ ಚಿತ್ರದಲ್ಲಿ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನಿಪಿ-5 ರಿಂದ 8 ರಲ್ಲಿರುವ ಸದರಿ ವಾಹನವನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಿನ ಮೇಲೆ ಹೇಳಿದಂತೆ ಗಲಾಟೆ ಮಾಡಿದ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಅವರೇ ಈ ಪ್ರಕರಣದಲ್ಲಿ ನ್ಯಾಯಾಲಯದ ಮುಂದೆ ಇರುವ ಆರೋಪಿತರು ಆಗಿರುತ್ತಾರೆ. ಸದರಿ 2 ನೇ ಆರೋಪಿಯು ಹಲ್ಲೆಗೆ ಬಳಸಿದ್ದ ವಾಹನದ ಕೀ ನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್ ಎನ್ ಎಲ್ ವಕೀಲರಿಂದಃ**

ನಾನು 36 ವರ್ಷಗಳಿಂದ ಪೋಲೀಸ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿಃ28.02.2022 ರದು ನಾನು ರೋಡ್ ಕ್ಲಿಯರ್ ಕೆಲಸವನ್ನು ಮಾಡುತ್ತಿದ್ದೆ. ನಾನು ಇಲಾಖಾ ದ್ವಿ ಚಕ್ರ ವಾಹನದಲ್ಲಿ ಹೋಗಿದ್ದು ದ್ವಿ ಚಕ್ರ ವಾಹನದ ನೋ. ಸಂ. ನೆನಪಿಲ್ಲ. ಸದರಿ ದಿನ ನಾನು ಸದರಿ ಸ್ಥಳದಲ್ಲಿ ಕರ್ತವ್ಯ ನಿರ್ವಹಿಸಿರುವ ಬಗ್ಗೆ ಯಾವುದೇ

ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿ. ಮೇಲೆ ಹೇಳಿದ ವಾಹನವನ್ನು ಮುಖ್ಯ ರಸ್ತೆಯಲ್ಲಿ ನಿಲ್ಲಿಸಿದ್ದರು. ಸದರಿ ವಾಹನವನ್ನು ರಸ್ತೆಯ ಬಲಬಾಗದಲ್ಲಿ ನಿಲ್ಲಿಸಿದ್ದರು. ಸಾಕ್ಷಿ ಸ್ವತಃ ನುಡಿಯುತ್ತಾರೆ ಸದರಿ ವಾಹನವನ್ನು ಪೋಲೀಸ್ ಠಾಣೆಯಿಂದ ಬಸ್ ನಿಲ್ದಾಣಕ್ಕೆ ಬರುವಾಗ ರಸ್ತೆಯ ಎಡಭಾಗದಲ್ಲಿ ನಿಲ್ಲಿಸಿದ್ದರು. ಸದರಿ ಸ್ಥಳದಲ್ಲಿ ಪೋಲೀಸ್ ಇಲಾಖೆಯ ಯಾವುದೇ ಸಿ ಸಿ ಟಿವಿಗಳು ಇರಲಿಲ್ಲ. ಖಾಸಗಿ ಅಂಗಡಿಗಳಲ್ಲಿ ಸಿ ಸಿ ಟಿ ವಿ ಇರುತ್ತದೆ. ನಿಡಿ 1 ಅನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿ ಅದರಲ್ಲಿ ತನ್ನ ಸಹಿ ಇರುತ್ತದೆ ಎಂದು ಒಪ್ಪಿರುತ್ತಾರೆ. ನಿಡಿ 1 ಅನ್ನು ದಿಃ 28.01.2022 ರಂದು ಮೇಲೆ ಹೇಳಿದ ಕ್ರೂಸರ್ ವಾಹನಕ್ಕೆ ಸಂಜೆ 5-30 ಕ್ಕೆ ನೀಡಲಾಗಿತ್ತು. ನನಗೆ ವಾಹನ ಟ್ರಾಫಿಕ್ ನಿಯಮಗಳನ್ನು ಉಲ್ಲಂಘಿಸಿದಲ್ಲಿ ದಂಡ ಹಾಕಲು ಅಧಿಕಾರ ಇರುತ್ತದೆ. ಸದರಿ ದಿನ ಸ್ಥಳದಲ್ಲಿ 5-6 ಜನ ಇದ್ದರು. ನಿಡಿ 1 ಅನ್ನು, 1 ಸೀಟು ಹೆಚ್ಚುವರಿ ಹಾಕಿದ ಕಾರಣ ನೀಡಿರುತ್ತೇನೆ. ನಿಡಿ 1 ರ ಪ್ರಕಾರ ನೀಡಿದ ನೋಟೀಸಿಗೆ ದಂಡದ ಹಣ ನೀಡದೇ ಇದ್ದ ಕಾರಣ ಗಲಾಟೆ ಆಗಿರುತ್ತದೆ.

2. ನಿಪಿ 12 ರಲ್ಲಿ ಮೇಲಲೆ ಹೇಳಿದಂತೆ, ನಾನು ನಿಡಿ 1 ನೋಟೀಸು ನೀಡಿದಾಗ ಆರೋಪಿತರು ನಾನು ವಿದಿಸಿದ್ದ ದಂಡವನ್ನು ನೀಡದೇ ಇದ್ದುದರಿಂದ ಗಲಾಟೆ ಆಗಿರುತ್ತದೆ ಎಂದು ಎಲ್ಲಿಯೂ ನಮೂದಿಸಿರುವುದಿಲ್ಲ ಎಂದರೆ ಸರಿ. ಸದರಿ ವಿಚವಾರವನ್ನು ನಮೂದಿಸಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ವಾಹನ ತೆಗೆಯದಿದ್ದರೆ ದಂಡ ವಿಧಿಸಬೇಕಾಗುತ್ತದೆ ಎಂದು ಹೇಳಿದಾಗ ಆರೋಪಿತರು ಅದನ್ನು ಪ್ರತಿಭಟಿಸಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಿನ ನಾನು ಸಮವಸ್ತ ಧರಿಸಿ ಕರ್ತವ್ಯದಲ್ಲಿದ್ದೆ. ಸದರಿ ನಾನು ಧರಿಸಿದ್ದ ಸಮವಸ್ತಕ್ಕೆ ಯಾವುದೇ ಡ್ಯಾಮೇಜ್ ಆಗಿಲ್ಲ. ಸದರಿ ಘಟನೆಯ ಬಗ್ಗೆ ಅಕ್ಕಪಕ್ಕದ ಅಂಗಡಿಯ ಸಿ ಸಿ ಟಿ ವಿ ಪೂಟೇಜ್ ಅನ್ನು ಸಂಗ್ರಹಿಸಿರುವುದಿಲ್ಲ. ನಾನು ಆಸ್ಪತ್ರೆಗೆ ಹೋದಾಗ ರಾತ್ರಿ 7-20 ಆಗಿತ್ತು. ಆಸ್ಪತ್ರೆಗೆ ಹೋಗುವಾಗ ನನಗೆ ಆರೋಪಿತರ ಹೆಸರು ಗೊತ್ತಿತ್ತು ವೈದ್ಯರ ಬಳಿ ಆರೋಪಿತರ ಹೆಸರನ್ನು ಹೇಳಲು ನನಗೆ ಯಾವುದೇ ತೊಂದರೆ

ಇರಲಿಲ್ಲ . ಘಟನಾ ಸ್ಥಳಕ್ಕೂ ಆಸ್ಪತ್ರೆಗೂ ಸುಮಾರು 1 ಕಿ ಮೀ ಅಂತರ ಇತ್ತು. ನಾನು ಪ್ರಕರಣ ರಿಜಿಸ್ಟರ್ ಆದ ನಂತರ ಆಸ್ಪತ್ರೆಗೆ ಹೋಗಿರುತ್ತೇನೆ. ಸಾಮಾನ್ಯವಾಗಿ ಹಲ್ಲೆ ಪ್ರಕರಣದಲ್ಲಿ ಜಾಸ್ತಿ ಏಟು ಅಗಿದ್ದಲ್ಲಿ ಮೊದಲು ಆಸ್ಪತ್ರೆಗೆ ಹೋಗಿ ಆ ನಂತರ ದೂರು ನೀಡಲಾಗುತ್ತದೆ. ಕಡಿಮೆ ಏಟು ಆಗಿದ್ದಲ್ಲಿ ಮೊದಲು ದೂರನ್ನು ನೀಡಲಾಗುತ್ತದೆ. ನಂತರ ಚಿಕಿತ್ಸೆಯನ್ನು ಪಡೆಯಲಾಗುತ್ತದೆ. ಸಂತೆಯ ಸಮಯದಲ್ಲಿ ಬೇಲೂರು ರಸ್ತೆಯಲ್ಲಿ ಹೆಚ್ಚಿನ ವಾಹನಗಳು ಓಡಾಡುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಿನ ನಾನು ಮತ್ತು ಚಾಸಾ 2 ಜೊತೆಯಲ್ಲೇ ಕರ್ತವ್ಯ ನಿರ್ವಹಿಸುತ್ತಿದ್ದೆವು. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಆರೋಪಿತರು ನನ್ನ ಮೇಲೆ ಯಾವುದೇ ರೀತಿ ಹಲ್ಲೆ ಮಾಡಿಲ್ಲ , ನನ್ನ ಕರ್ತವ್ಯಕ್ಕೆ ಅಡ್ಡಿ ಪಡಿಸಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಖಾಸಗಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದು ಕಾನೂನನ್ನು ಪಾಲಿಸುವ ವ್ಯಕ್ತಿಗಳಾಗಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರು ಸದರಿ ವಾಹನವನ್ನು ಮುಖ್ಯ ರಸ್ತೆಯಲ್ಲಿ ಸಂಚಾರಕ್ಕೆ ಅಡಚಣೆ ಆಗುವ ರೀತಿ ನಿಲ್ಲಿಸಿರಲಿಲ್ಲ , ನಾನು ಆರೋಪಿತರ ವಿರುದ್ದ ಸುಳ್ಳು ದೂರನ್ನು ನೀಡಿ ಸುಳ್ಳು ಸಾಕ್ಷಿ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನಿ ಡಿ 1 ರಂತೆ ನೋಟೀಸು ನೀಡಿ ಆರೋಪಿತರ ಬಳಿ ನಿಗಧಿತ ದಂಡದ ಮೊತ್ತಕ್ಕಿಂತ ಹೆಚ್ಚಿನ ಹಣಕ್ಕೆ ಬೇಡಿಕೆ ಇಟ್ಟಿದ್ದು ಅವರು ಕೂಡಲು ನಿರಾಕರಿಸಿದಾಗ ಆರೋಪಿತರ ವಿರುದ್ದ ಸುಳ್ಳು ದೂರು ನೀಡಿ ಸುಳ್ಳು ಪ್ರಕರಣ ದಾಖಲಾಗುವಂತೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಚಾಸಾ 2 ಮತ್ತು ತನಿಖಾಧಿಕಾರಿ ಸೇರಿ ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲಾಗುವಂತೆ ಮಾಡಿ ಆರೋಪಿತರು ನ್ಯಾಯಾಂಗ ಬಂಧನಕ್ಕೆ ಹೋಗುವಂತೆ ಮಾಡಿ ಅವರ ವಾಹನ ಜಪ್ತಿ ಆಗುವಂತೆ ಮಾಡಿ ಅವರಿಗೆ ವಿನಾಃ ಕಾರಣ ತೊಂದರೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

3. ಚಾಸಾ 9 ರವರು ದಿಃ28.02.2022 ರಂದು ನಾನು 7-20 ಕ್ಕೆ ಚಿಕಿತ್ಸೆಗೆ ಹಲ್ಲೆಯ ಇತಿಹಾಸದೊಂದಿಗೆ ಬಂದಿರುತ್ತಾರೆ ಎಂದು ಹೇಳಿರುತ್ತಾರೆ , ಎಂದರೆ ಸಾಕ್ಷಿಯು ನಾನು 7-20 ಕ್ಕೆ ಹೋಗಿದ್ದೆ ಎನ್ನುತ್ತಾರೆ. ನನಗೆ 2 ನೇ ಆರೋಪಿಯು ಕೀ ಯಿಂದ ಹಲ್ಲೆ

ಮಾಡಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ , ಒಂದು ವೇಳೆ ಕೀ ಯಿಂದ ಹಲ್ಲೆ ಮಾಡಿದ್ದಲ್ಲಿ ಅದನ್ನು ಮಹಜರು ಮೂಲಕ ಅದೇ ದಿನ ವಶಪಡಿಸಿಕೊಳ್ಳಬೇಕಾಗಿತ್ತು ಎಂದರೆ ಸರಿಯಲ್ಲ. ಆರೋಪಿತರು ನಾನು ಹೇಳಿರುವಂತೆ ನನಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಹಲ್ಲೆ ಮಾಡಿಲ್ಲ, ಯಾವುದೇ ರೀತಿ ಕರ್ತವ್ಯಕ್ಕೆ ಅಡ್ಡಿ ಪಡಿಸಿಲ್ಲ ಎಂದರೆ ಸರಿಯಲ್ಲ. ಚಾಸಾ 2 ಮತ್ತು ಇತರರು ಬಂದು ಗಲಾಟೆ ಬಿಡಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಸಾಕ್ಷಿ ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಬೇಲೂರು